# ಮುಖ್ತ್ಯಾರನಾಮೆ ಅಧಿನಿಯಮ, 1882

## (1882ರ ಅಧಿನಿಯಮ ಸಂಖ್ಯೆ 7)

[24ನೇ ಫೆಬ್ರವರಿ 1882]

ಮುಖ್ತ್ಯಾರನಾಮೆಗಳಿಗೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಮುಖ್ತ್ಯಾರನಾಮೆಗಳಿಗೆ ಸಂಬಂಧಿಸಿದ ಕಾನೂನುಗಳನ್ನು ತಿದ್ದುಪಡಿ ಮಾಡುವ ಉದ್ದೇಶಕ್ಕಾಗಿ ಅದನ್ನು ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

1. ಸಂಕ್ಷಿಪ್ತ ಹೆಸರು:- ಈ ಅಧಿನಿಯಮವನ್ನು ಮುಖ್ತ್ಯಾರನಾಮೆ ಅಧಿನಿಯಮ, 1882 ಎಂದು ಕರೆಯತಕ್ಕುದು.

ಸ್ಥಳೀಯ ವ್ಯಾಪ್ತಿ ಮತ್ತು ಪ್ರಾರಂಭ:- ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಅನ್ವಯವಾಗುತ್ತದೆ; ಮತ್ತು ಇದು 1882ರ ಮೇ 1ರಂದು ಜಾರಿಗೆ ಬರತಕ್ಕುದು.

1ಎ. ಪರಿಭಾಷೆ:- ಈ ಅಧಿನಿಯಮದಲ್ಲಿ "ಮುಖ್ತ್ಯಾರನಾಮೆ" ಎಂಬುದು, ಒಂದು ಲಿಖಿತವನ್ನು ಬರೆದು ಕೊಡುವ ವ್ಯಕ್ತಿಯ ಪರವಾಗಿ ಮತ್ತು ಅವನ ಹೆಸರಿನಲ್ಲಿ ಕಾರ್ಯ ನಿರ್ವಹಿಸಲು ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ಅಧಿಕೃತಗೊಳಿಸುವ ಯಾವುದೇ ಲಿಖಿತವನ್ನು ಒಳಗೊಳ್ಳುತ್ತದೆ.

2. ಮುಖ್ತ್ಯಾರನಾಮೆಯ ಮೇರೆಗೆ ಬರೆದುಕೊಡುವುದು:- ಮುಖ್ತ್ಯಾರನಾಮೆಯನ್ನು ಪಡೆದವನು ಸೂಕ್ತವೆಂದು ಯೋಚಿಸಿದರೆ, ಅವನು ಆ ಮುಖ್ತ್ಯಾರನಾಮೆಯನ್ನು ಕೊಟ್ಟವನ ಪ್ರಾಧಿಕಾರದ ಮೂಲಕ, ತನ್ನ ಸ್ವಂತ ಹೆಸರಿನಲ್ಲಿ ಮತ್ತು ಸಹಿಯೊಂದಿಗೆ ಮತ್ತು ಮೊಹರಿನ ಅಗತ್ಯವಿರುವಲ್ಲಿ ತನ್ನ ಸ್ವಂತ ಮೊಹರಿನೊಂದಿಗೆ ಯಾವುದೇ ಲಿಖಿತವನ್ನು ಬರೆದು ಕೊಡಬಹುದು ಅಥವಾ ಯಾವುದೇ ಕಾರ್ಯವನ್ನು ಮಾಡಬಹುದು; ಮತ್ತು ಹಾಗೆ ಬರೆದುಕೊಟ್ಟ ಪ್ರತಿಯೊಂದು ಲಿಖಿತವು ಮತ್ತು ಹಾಗೆ ಮಾಡಿದ ಪ್ರತಿಯೊಂದು ಕಾರ್ಯವು, ಆ ಮುಖ್ತ್ಯಾರನಾಮೆಯನ್ನು ಪಡೆದವನು ಆ ಮುಖ್ತ್ಯಾರನಾಮೆ ಕೊಟ್ಟವನ ಹೆಸರಿನಲ್ಲಿ ಮತ್ತು ಅವನ ಸಹಿ ಹಾಗೂ ಮೊಹರಿನೊಂದಿಗೆ ಅದನ್ನು ಬರೆದು ಕೊಟ್ಟಿದ್ದಿದ್ದರೆ ಅಥವಾ ಮಾಡಿದ್ದಿದ್ದರೆ ಹೇಗೋ ಹಾಗೆ ಕಾನೂನಿನ ದೃಷ್ಟಿಯಲ್ಲಿ ಪರಿಣಾಮಕಾರಿಯಾಗತಕ್ಕುದು.

ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚೆ ಅಥವಾ ಆ ತರುವಾಯ ಬರೆದುಕೊಟ್ಟಿರುವ ಲಿಖಿತಗಳ ಮೂಲಕ ಸೃಜಿಸಲಾದ ಮುಖ್ತ್ಯಾರನಾಮೆಗಳಿಗೆ ಈ ಪ್ರಕರಣವು ಅನ್ವಯಿಸುತ್ತದೆ.

3. ಮರಣ ಮುಂತಾದವುಗಳ ಬಗ್ಗೆ ನೋಟೀಸಿಲ್ಲದೆ ಮುಖ್ತ್ಯಾರನಾಮೆಯ ಮೇರೆಗೆ ಅಟಾರ್ನಿಯು ಮಾಡಿದ ಸಂದಾಯವು ಯುಕ್ತವಾದುದಾಗಿರುವುದು:- ಮುಖ್ತ್ಯಾರನಾಮೆಗನುಸಾರವಾಗಿ ಸದ್ಭಾವನೆಯಿಂದ ಯಾವುದೇ ಸಂದಾಯವನ್ನು ಅಥವಾ ಯಾವುದೇ ಕಾರ್ಯವನ್ನು ಮಾಡುವ ಯಾರೇ ವ್ಯಕ್ತಿಯು, ಅಂಥ ಸಂದಾಯ ಅಥವಾ ಕಾರ್ಯಕ್ಕೆ ಮುಂಚೆ ಮುಖ್ತ್ಯಾರನಾಮೆ ಕೊಟ್ಟವನು ಮರಣ ಹೊಂದಿದ್ದನೆಂಬ ಅಥವಾ ಅಸ್ವಸ್ಥಚಿತ್ತನಾಗಿದ್ದನೆಂಬ ಅಥವಾ ದಿವಾಳಿಯಾಗಿದ್ದನೆಂಬ ಅಥವಾ ಮುಖ್ತ್ಯಾರನಾಮೆಯನ್ನು ರದ್ದುಗೊಳಿಸಿದ್ದನೆಂಬ ಸಂಗತಿಯು, ಆ ಸಂದಾಯವನ್ನು ಅಥವಾ ಕಾರ್ಯವನ್ನು ಮಾಡುವ ಕಾಲದಲ್ಲಿ ಹಾಗೆ ಮಾಡುವ ವ್ಯಕ್ತಿಗೆ ಗೊತ್ತಿಲ್ಲದಿದ್ದರೆ ಮುಖ್ತ್ಯಾರನಾಮೆಯನ್ನು ಬರೆದುಕೊಟ್ಟವನ ಮರಣ, ಅಸ್ವಸ್ಥಚಿತ್ತತೆ, ದಿವಾಳಿತನ ಅಥವಾ ಮುಖ್ತ್ಯಾರನಾಮೆಯ ರದ್ದಿಯಾತಿಯ ಕಾರಣದಿಂದ ಆ ಸಂದಾಯ ಅಥವಾ ಕಾರ್ಯದ ಬಗ್ಗೆ ಹೊಣೆಗಾರನಾಗತಕ್ಕುದಲ್ಲ.

ಆದರೆ ಈ ಪ್ರಕರಣವು, ಹಾಗೆ ಸಂದಾಯ ಮಾಡಿದ ಯಾವುದೇ ಹಣದಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯು ಹಣಪಡೆದವನ ವಿರುದ್ಧ ಹೊಂದಿರುವ ಯಾವುದೇ ಹಕ್ಕಿಗೆ ಬಾಧಕವುಂಟುಮಾಡತಕ್ಕುದಲ್ಲ, ಮತ್ತು ಆ ವ್ಯಕ್ತಿಯು, ಸಂದಾಯಗಾರನು ಆ ಸಂದಾಯವನ್ನು ಮಾಡಿಲ್ಲದಿದ್ದರೆ, ಆ ಸಂದಾಯಗಾರನ ವಿರುದ್ಧ ಹೊಂದಿರಬಹುದಾಗಿದ್ದಂಥದೇ ಪರಿಹಾರೋಪಾಯವನ್ನು ಹಣ ಪಡೆದವನ ವಿರುದ್ಧ ಹೊಂದಿರತಕ್ಕುದು.

ಈ ಅಧಿನಿಯಮವು ಜಾರಿಗೆ ಬಂದ ತರುವಾಯ ಮಾಡಿದ ಸಂದಾಯಗಳಿಗೆ ಮತ್ತು ಕಾರ್ಯಗಳಿಗೆ ಮಾತ್ರ ಈ ಪ್ರಕರಣವು ಅನ್ವಯಿಸುತ್ತದೆ.

4. ಮುಖ್ತ್ಯಾರನಾಮೆಯನ್ನು ಸೃಜಿಸುವ ಮೂಲ ಲಿಖಿತಗಳನ್ನು ಭದ್ರವಾಗಿ ಇಡುವುದು:- (ಎ) ಯಾವ ಮುಖ್ತ್ಯಾರನಾಮೆ ಬರೆದುಕೊಡುವಿಕೆಯನ್ನು ಶಪಥ ಪತ್ರ, ಶಾಸನಾತ್ಮಕ ಘೋಷಣೆ ಅಥವಾ ಇತರೆ ಸಾಕಷ್ಟು ಸಾಕ್ಷ್ಯದ ಮೂಲಕ ಸತ್ಯಾಪನ ಮಾಡಲಾಗಿದೆಯೋ ಆ ಮುಖ್ತ್ಯಾರನಾಮೆಯನ್ನು ಸೃಜಿಸುವ ಒಂದು ಲಿಖಿತವನ್ನು, ಆ ಶಪಥ ಪತ್ರ ಅಥವಾ ಘೋಷಣೆ, ಯಾವುದಾದರೂ ಇದ್ದರೆ ಅದರೊಂದಿಗೆ ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಆ ಲಿಖಿತವು ಬರಬಹುದೋ ಆ ಉಚ್ಚ ನ್ಯಾಯಾಲಯದಲ್ಲಿ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ಭದ್ರವಾಗಿ ಇಡಬಹುದು.

(ಬಿ) ಹಾಗೆ ಭದ್ರವಾಗಿ ಇಟ್ಟಿರುವ ಲಿಖಿತಗಳ ಒಂದು ಪ್ರತ್ಯೇಕ ಕಡತವನ್ನು ಇಟ್ಟಿರತಕ್ಕುದು; ಮತ್ತು ಆ ಕಡತವನ್ನು ಯಾವನೇ ವ್ಯಕ್ತಿಯು ಶೋಧಿಸಬಹುದು, ಮತ್ತು ಹಾಗೆ ಭದ್ರವಾಗಿ ಇಟ್ಟಿರುವ ಪ್ರತಿಯೊಂದು ಲಿಖಿತವನ್ನು ಪರಿಶೀಲಿಸಬಹುದು; ಮತ್ತು ಅದರ ಒಂದು ಪ್ರಮಾಣಿತ ಪ್ರತಿಯು ತನಗೆ ಬೇಕೆಂದು ಕೇಳಿ ಕೊಂಡಾಗ ಅವನಿಗೆ ಅದನ್ನು ಕೊಡತಕ್ಕುದು.

(ಸಿ) ಹಾಗೆ ಭದ್ರವಾಗಿ ಇಟ್ಟಿರುವ ಲಿಖಿತದ ಒಂದು ಪ್ರತಿಯನ್ನು ಕಚೇರಿಯಲ್ಲಿ ಹಾಜರುಪಡಿಸಬಹುದು ಮತ್ತು ಪ್ರಮಾಣಿತ ಪ್ರತಿಯೆಂದು ಅದಕ್ಕೆ ಮುದ್ರೆ ಒತ್ತಬಹುದು ಅಥವಾ ಗುರುತು ಮಾಡಬಹುದು, ಮತ್ತು ಹಾಗೆ ಮುದ್ರೆ ಒತ್ತಿದಮೇಲೆ ಅಥವಾ ಗುರುತು ಮಾಡಿದಮೇಲೆ ಅದು ಪ್ರಮಾಣಿತ ಪ್ರತಿಯಾಗತಕ್ಕುದು ಮತ್ತು ಆಗಿರತಕ್ಕುದು.

(ಡಿ) ಹಾಗೆ ಭದ್ರವಾಗಿ ಇಟ್ಟಿರುವ ಒಂದು ಪ್ರಮಾಣಿತ ಪ್ರತಿಯು ಹೆಚ್ಚಿನ ರುಜುವಾತಿಲ್ಲದೆ, ಆ ಲಿಖಿತದ ಒಳಾಂಶಗಳ ಬಗ್ಗೆ ಮತ್ತು ಅದನ್ನು ಉಚ್ಚ ನ್ಯಾಯಾಲಯದಲ್ಲಿ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ಭದ್ರವಾಗಿ ಇಟ್ಟಿರುವ ಬಗ್ಗೆ ಸಾಕಷ್ಟು ಸಾಕ್ಷ್ಯವಾಗಿರತಕ್ಕುದು.

(ಇ) ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ಈ ಪ್ರಕರಣದ ಉದ್ದೇಶಗಳಿಗಾಗಿ ಮತ್ತು ರಾಜ್ಯ ಸರ್ಕಾರದ ಸಹಮತಿಯಿಂದ (ಎ), (ಬಿ) ಮತ್ತು (ಸಿ) ಖಂಡಗಳ ಮೇರೆಗೆ ತೆಗೆದುಕೊಳ್ಳಬೇಕಾದ ಫೀಜುಗಳನ್ನು ಗೊತ್ತುಪಡಿಸಿ ನಿಯಮಗಳನ್ನು ರಚಿಸಬಹುದು.

(ಎಫ್) [ನಿರಸಿತವಾಗಿದೆ]

(ಜಿ) ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚೆ ಅಥವಾ ಆ ತರುವಾಯ ಬರೆದುಕೊಟ್ಟ ಮುಖ್ತ್ಯಾರನಾಮೆಗಳನ್ನು ಸೃಜಿಸುವ ಲಿಖಿತಗಳಿಗೆ ಈ ಪ್ರಕರಣವು ಅನ್ವಯವಾಗುತ್ತದೆ.

5. ವಿವಾಹಿತ ಮಹಿಳೆಯರ ಮುಖ್ತ್ಯಾರನಾಮೆ:- ಒಬ್ಬ ವಯಸ್ಕ ಮಹಿಳೆಯು, ಈ ಅಧಿನಿಯಮದ ಕಾರಣದಿಂದಾಗಿ ಯಾವ ಮರಣ ಶಾಸನೇತರ ಲಿಖಿತವನ್ನು ತಾನೇ ಸ್ವತಃ ಬರೆದುಕೊಡಬಹುದೋ ಅಥವಾ ಯಾವ ಇತರೆ ಕಾರ್ಯವನ್ನು ತಾನು ಸ್ವತಃ ಮಾಡಬಹುದೋ, ಆ ಯಾವುದೇ

ಮರಣ ಶಾಸನೇತರ ಲಿಖಿತವನ್ನು ಬರೆದುಕೊಡುವ ಅಥವಾ ಆ ಯಾವುದೇ ಇತರ ಕಾರ್ಯವನ್ನು ಮಾಡುವ ಉದ್ದೇಶಕ್ಕಾಗಿ, ತಾನು ಅವಿವಾಹಿತೆಯಾಗಿದ್ದಿದ್ದರೆ ಹೇಗೋ ಹಾಗೆ ಮರಣ ಶಾಸನೇತರ ಲಿಖಿತದ ಮೂಲಕ ತನ್ನ ಪರವಾಗಿ ಒಬ್ಬ ಅಟಾರ್ನಿಯನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿರತಕ್ಕುದು ಮತ್ತು ಮುಖ್ತ್ಯಾರನಾಮೆಗಳನ್ನು ಸೃಜಿಸುವ ಲಿಖಿತಗಳಿಗೆ ಸಂಬಂಧಪಟ್ಟ ಈ ಅಧಿನಿಯಮದ ಉಪಬಂಧಗಳು ಅದಕ್ಕೂ ಅನ್ವಯವಾಗತಕ್ಕುದು.

ಈ ಅಧಿನಿಯಮವು ಜಾರಿಗೆ ಬಂದ ತರುವಾಯ ಬರೆದುಕೊಟ್ಟ ಲಿಖಿತಗಳಿಗೆ ಮಾತ್ರ ಈ ಪ್ರಕರಣವು ಅನ್ವಯವಾಗುತ್ತದೆ.

6. [1866ರ XXVIIIನೇ ಅಧಿನಿಯಮದ 39ನೇ ಪ್ರಕರಣದ ನಿರಸನ] - ಇದು ತಿದ್ದುಪಡಿ ಅಧಿನಿಯಮ, 1891 (1891ರ 12)ರ 2ನೇ ಪ್ರಕರಣ ಮತ್ತು 1ನೇ ಅನುಸೂಚಿಯ ಮೂಲಕ ನಿರಸಿತವಾಗಿದೆ.

* * *

ಮುದ್ರಣಕರು: ನಿರ್ದೇಶಕರು, ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು - 1, ಕಾ.ಸಂ.-P- 668. LA-P13 .